ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಆಹಾರಕ್ಕೂ ವಿಹಾರಕ್ಕೂ ಏನು ವ್ಯತ್ಯಾಸ?



ಹೊಟ್ಟೆಯನ್ನು ಬೆಳೆಸಲು ಅದು, ಇಳಿಸಲು ಇದು.

ಬಿ.ವಿ. ಸುರೇಶ್, ಬೆಂಗಳೂರು
ಮೂರ್ಖರ ಪೆಟ್ಟಿಗೆ ಸ್ಮಾರ್ಟ್, ಸ್ಲಿಮ್ ಆಗಿರುವುದರಿಂದ ಈಗ ಪೆಟ್ಟಿಗೆಯಾಗಿ ಉಳಿದಿಲ್ಲವಲ್ಲ?
ಈಗಲೂ ಅದು ಮೂರ್ಖರಿಗೆ ಹಾನಿ ಮಾಡುವಂಥದ್ದೇ ಮೂರ್ಖರ ಪೆಟ್ಟಿಗೆ.

ಮೈಸೂರು ಕುಸುಮ, ಶ್ರವಣಬೆಳಗೊಳ
ಲಕ್ಷ, ಕೋಟಿ ಖರ್ಚು ಮಾಡಿ ಓದುವ ಈಗಿನ ವೈದ್ಯರಿಂದ ಸೇವಾಮನೋಭಾವವನ್ನು ನಿರೀಕ್ಷಿಸಬಹುದೆ?
ಖಂಡಿತ. ಲಕ್ಷ, ಕೋಟಿ ಕೊಟ್ಟವರ ಸೇವೆಯನ್ನು ಸೊಗಸಾಗಿ ಮಾಡುತ್ತಾರೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಮದ್ಯಪಾನ ಆರೋಗ್ಯಕ್ಕೆ ಹಾನಿಕರ. ಹುಡುಗಿಯರ ಪ್ರೀತಿ?



ಮದ್ಯಪಾನಕ್ಕೆ ಹಾನಿಕರ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ನಮ್ಮ ಕಾನೂನಿನಲ್ಲಿ ಅಪರಾಧಿಗೆ ಕಷ್ಟವಿಲ್ಲದೆ ಜಾಮೀನು ಸಿಕ್ಕಿಬಿಡುತ್ತದಲ್ಲಾ, ಏಕೆ?
ದ್ವಾಪರನಿಯಮ. ಶಿಶುಪಾಲ ನೂರು ತಪ್ಪುಗಳವರೆಗೆ ಜಾಮೀನು ಮೇಲೆ ತಿರುಗಾಡುತ್ತಿದ್ದ.

ನಾರಾಯಣ ಯಾಜಿ, ಶಿರಾಲಿ
ದಾನಧರ್ಮಗಳಲ್ಲಿ ಇತ್ತೀಚೆಗೆ ಹಲವೆಡೆ ಅತ್ತೆಯ ಕೈ ದೊಡ್ಡ, ಸೊಸೆಯ ಕೈ ಸಣ್ಣ ಆಗುತ್ತಿದೆಯಲ್ಲ?
ಅತ್ತೆ ಪರದಲ್ಲಿ ಸುಖ ಪಡೆಯಲು ದಾನಿ. ಸೊಸೆ ಇಹದಲ್ಲಿ ಸುಖ ಪಡೆಯಲು ನಿಧಾನಿ.

ರಾಜಶೇಖರ ಹಾದಿಮನಿ, ಧಾರವಾಡ
ಶಾಸಕ, ಟಿಕೆಟು, ಮಂತ್ರಿಗಿರಿಗೆ ನೂಕುನುಗ್ಗಲು ತಪ್ಪಿಸುತ್ತೀರಾ ರಾಮ್‌ಜೀ?
ಹ್ಞ! ತಿಪ್ಪೆ ಬೆಳೆಸಿ ನೊಣವನ್ನು ದೂರ ಇಡುವುದು ಅಸಾಧ್ಯ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಬಾಸ್‌ಗೂ ಬಿಗ್ ಬಾಸ್‌ಗೂ ವ್ಯತ್ಯಾಸವೇನು?
ಬಾಸ್ ಕೆಲಸಕ್ಕೆ ಬಾರದ ಘಟಿಂಗರನ್ನೆಲ್ಲ ಸೇರಿಸಿಕೊಳ್ಳುವುದಿಲ್ಲ.

ಅನಂತಪದ್ಮನಾಭ ಹೆಚ್.ಎಂ. ಮೈಸೂರು
ಲೇಡೀಸ್ ವಾಚ್, ಲೇಡೀಸ್ ಬ್ಯಾಗ್, ಲೇಡೀಸ್ ಚಪ್ಪಲ್ ಇರುವಂತೆ ಲೇಡೀಸ್ ಪೆನ್ ಏಕಿಲ್ಲ?
ಅವರಿನ್ನೂ ಪೆನ್ಸಿಲ್ಲಿನ ಮಟ್ಟದಲ್ಲೇ ಇದ್ದಾರೆ ಐಬ್ರೋ ಪೆನ್ಸಿಲ್, ಲಿಪ್ ಲೈನರ್ ಪೆನ್ಸಿಲ್...

ಬಿ. ಚಂದ್ರೇಗೌಡ, ಬೆಂಗಳೂರು
ಹಾಡುವ ಹುಡುಗಿ ಸಂಗಾತಿಯಾದರೆ ಹುಡುಗನಿಗೆ ಲಾಭವೋ ನಷ್ಟವೋ?
ಅವನೊಡನೆ ಜಂಟಿವರಸೆಯಾದರೆ ಲಾಭ; ಅಪಸ್ವರವಾದರೆ ನಷ್ಟ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ತೂತುಗಳಿಲ್ಲದ ದೋಸೆ ರುಚಿಯಿರುವುದಿಲ್ಲ. ಏಕೆ ರಾಂ?
ಚಟ್ನಿ, ಸಾಂಬಾರ್, ಪಲ್ಯಗಳ ರಸ ಇಳಿದು ಬೆರೆಯಲು ಜಾಗ ಇರುವುದಿಲ್ಲವಲ್ಲ.

ನಖಾತೆ ಆನಂದರಾವ್, ಮೈಸೂರು
ಎಂದೆಂದಿಗೂ ಉತ್ಸಾಹ, ಹುಮ್ಮಸ್ಸು ಇರುವುದಕ್ಕೆ ಯಾವ ಬಗೆಯ ಜೀವನವನ್ನು ಆಯ್ದುಕೊಳ್ಳಬೇಕು?
ಮಕ್ಕಳ ಸ್ಪೋರ್ಟ್ಸ್ ಟೀಚರ್ ಕೆಲಸವನ್ನು.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಮನಸ್ಸಿನ 'ಶುದ್ಧೀಕರಣ' ಹೇಗೆ?
ವಿವೇಕದ ಫಿಲ್ಟರ್ ಬಳಸಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಹೆಣ್ಣಿಗೆ ಎರಡು ಮನೆ. ಗಂಡಿಗೆ?
ಹೆಣ್ಣಿನ ವಿಷಯದಲ್ಲಂತೂ ಎರಡು ಮನ.

## ವಾರದ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ
ಒಳ್ಳೆಯ ಹೆಸರಿದ್ದರೂ ಮದುವೆಯ ನಂತರ ಮಹಿಳೆಯರ ಹೆಸರನ್ನು ಬದಲಿಸುವುದೇಕೆ?
ಮುದ್ದಿಗೆ, ಪ್ರೀತಿಗೆ ಬಳಸಲಾಗುತ್ತಿದ್ದ ಹೆಸರನ್ನು ದೂರಿಗೆ, ಅವಹೇಳನಕ್ಕೆ ಬಳಸುವುದು ಬೇಡವೆಂದು.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಕೆಲವು ವೇಳೆ ಯಾಕಾದರೂ ವಯಸ್ಸು ಆಗಿಬಿಡುತ್ತದೋ ಅನ್ನಿಸಿಬಿಡಲು ಕಾರಣ?
ಸುಳಿದಾಡುತ್ತಿರುವ ಅಪ್ಸರೆಯನ್ನೂ ಮೀರಿಸುವ ಸುಂದರಿಯರು.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಮನುಷ್ಯನ ಆಶೆ ಕೊನೆಯಾಗುವುದು ಯಾವಾಗ?
ಅದು ನಿರಂತರ. ಆಶೆ ಕೊನೆಯಾಗಲಿ ಎಂಬುದೂ ಆಶೆಯೇ!

ಬಿ.ಆರ್. ಉಷಾ, ಬೆಂಗಳೂರು
ಇಲ್ಲೊಬ್ಬಳು ನನ್ನನ್ನು ನೋಡಿ 'ದೂರ ದೂರ ಅಲ್ಲೆ ನಿಲ್ಲಿ ನನ್ನ ದೇವರೆ' ಎನ್ನುವಳಲ್ಲ?



ಜಿಮ್ಮಿನಿಂದ ನೇರವಾಗಿ ಅವಳಲ್ಲಿಗೆ ಹೋದಿರಂತಲ್ಲ. ಅವಳಿಗೆ ಬೆವರು ಅಲರ್ಜಿ.

ಮುರಳೀಧರ ಕುಲಕರ್ಣಿ, ಬೀದರ್
ಮಂತ್ರಿಗಳನ್ನು ಜನಸೇವಕರೆಂದು ಕರೆಯುವ ಬದಲು ದೊರೆ, ಯುವರಾಜ ಎಂದೆಲ್ಲ ಸಂಬೋಧಿಸುವುದು ಸರಿಯೆ?
ನೌಕರನನ್ನೂ ದೊರೆ, ಯುವರಾಜ ಎನ್ನುವರಲ್ಲ; ಕೆಲಸವಾಗಬೇಕಾದಾಗ ದೊರೆತವನೇ ದೊರೆ.

ಎಸ್ವೆನ್ ಮಹಾಬಲರಾವ್, ಎನ್ನಾರ್ಪುರ
ಮಗುವನ್ನು ತಕ್ಕಡಿಗೆ ಹಾಕಿದಾಗ ಹತ್ತು ಕೆಜಿ ತೂಗಿತು?
ವೈದ್ಯರ ಬಿಲ್ ಸಮೇತ ಹಾಕಿದ್ದೀರಿ. ಬಿಲ್ಲಿನ ತೂಕವೇ ಏಳು ಕಿಲೋ.

■ ರಾಮ್